**CW : 1**

PW : 1

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.497/2022

| | | |
|---|---|---|
| ಸಾಕ್ಷಿದಾರರ ಹೆಸರು | : | ಸುಷ್ಮಾ ಗೋಪಾಲ ಕೃಷ್ಣ ಭಂಡಾರಿ |
| ತಂದೆಯ ಹೆಸರು | : | ಗೋಪಾಲ ಕೃಷ್ಣ ಭಂಡಾರಿ |
| ಪ್ರಾಯ | : | 34 ವರ್ಷ |
| ಉದ್ಯೋಗ | | ಪಿ ಎಸ್ ಐ ಪುತ್ತೂರು ಗ್ರಾಮಾಂತರ ಪೋ ಠಾಣೆ |
| ವಾಸಸ್ಥಳ | : | ಪೋಲಿಸ್ ವಸತಿ ಗೃಹ ಸಂಪ್ಯ |

ದಿನಾಂಕಃ**09.09.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು 05.08.2024 ರಿಂದ ಪ್ರಸ್ತುತವೂ ಸಹ ಪುತ್ತೂರು ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 18.01.2025 ರಂದು ಸಾಯಂಕಾಲ ನಾನು ನನ್ನ ಸಿಬ್ಬಂದಿಗಳಾದ ಚಾಸಾ5 ರಿಂದ 9 ರವ ಜೊತೆ ಗಸ್ತು ಕರ್ತವ್ಯದಲ್ಲಿದ್ದಾಗ ಕುಂಬ್ರ ದ ಹತ್ತಿರ ಸುಮಾರು 6.45 ಗಂಟೆಗೆ ಬಾತ್ಮಿದಾರರಿಂದ ನನಗೆ ಪುತ್ತೂರು ತಾಲೂಕು ನಿಡ್ಪಳ್ಳಿ ಗ್ರಾಮದ ಕುಕ್ಕು ಪಡಿ ಎಂಬಲ್ಲಿ ವಿನಯ ಕುಮಾರ್ ಎಂಬಾತನು ಅಕ್ರಮವಾಗಿ ಮದ್ಯವನ್ನು ಇಟ್ಟುಕೊಂಡು ಮಾರಾ ಟ ಮಾಡುತ್ತಿದ್ದಾನೆ ಎಂದು ಮಾಹಿತಿ ಬಂದಿದ್ದು ಕೂಡಲೇ ನಾನು ಠಾಣೆಗೆ ವಾಪಸ್ಸು ಬಂದು ಅಗತ್ಯ ಸಲಕರಣೆಗಳನ್ನು ತೆಗೆದುಕೊಂಡು ಪುನಃ ನಿಡ್ಪಳ್ಳಿ ಗ್ರಾಮಕ್ಕೆ ಸುಮಾರು 7.15 ಗಂಟೆಗೆ ತಲುಪಿದೆನು. ಅಲ್ಲಿ ಪಂಚಾರಾದ ಚಾಸಾ2 ಹಾಗೂ ಚಾಸಾ3 ರವರಿಗೆ ಪ್ರಕರಣದ ಸಂಬಂಧಿತ ಮಾಹಿತಿಯನ್ನು ತಿಳಿಸಿ ಪಂಚರಾಗಿ ಇರುವಂತೆ ಕೇಳಿಕೊಂಡು ನೋಟಿಸು ಜಾರಿಗೊಳಿಸಿದ್ದೇನೆ. ನಮ್ಮ ಜೊತೆ ಅವರನ್ನು ಕರೆದುಕೊಂಡು ಸದರಿ ಸ್ದಳಕ್ಕೆ ಹೋದಾಗ ಸ್ದಳದಲ್ಲಿ ರಾಧಾಕೃಷ ರೈ ಎನ್ನುವವರ ದಿನಸಿ ಅಂಗಡಿಯ ಬಳಿ 4-5 ಜನ ಗುಂಪು ಕಟ್ಟಿ ನಿಂತುಕೊಂಡಿದ್ದರ ವೇಳೆ ನಮ್ಮ ಸಿಬ್ಬಂದಿಗಳು ಬರುವುದನ್ನು ನೋಡಿ ಅಲ್ಲಿ ಗುಂಪು ಕಟ್ಟಿಕೊಂಡಿದ್ದ ಜನರು ಓಡಿಹೋದರು. ನಾನು ಕೂಡಲೇ ಅಲ್ಲಿ ನಿಂತಿದ್ದ ಸಿಮೆಂಟ್ ಕಲರಿನ ಶರ್ಟ್ ನೀಲಿ ಬಣ್ಣದ ಪ್ಯಾಂಟ್ ಧರಿಸಿದ್ದ ವ್ಯಕ್ತಿಯನ್ನು ಹಿಡಿದು ವಿಚಾರಿಸಿದನು.

ಸಿಕ್ಕ ವ್ಯಕ್ತಿ ತನ್ನ ಹೆಸರನ್ನು ವಿನಯ ಕಮಾರ್ ಪ್ರಾಯ 38 ವರ್ಷ ತಂದೆ ಪೂವಪ್ಪ ವಾಸ ನಿಡ್ಪಳ್ಳಿ ಗ್ರಾಮ ಎಂದು ತಿಳಿಸಿದನು. ನಂತರ ಆತನ ಕೈಯಲ್ಲಿದ್ದ ಹಳದಿ ಬಣ್ಣದ ಚೀಲದಲ್ಲಿ ಏನು ಇದೆ ಕೇಳಿದಾಗ ಅದರಲ್ಲಿ ಮದ್ಯ ತುಂದಿಂದ ಪ್ಯಾಕೇಟ್ ಗಳು ಇರುವುದಾಗಿ ತಿಳಿಸಿದನು. ಅದನ್ನು ಇಟ್ಟುಕೊಳ್ಳಲು ಪರವಾನಗಿ ಇದೆಯಾ ಎಂದು ವಿಚಾರಿಸಲಾಗಿ ಆತ ಇರುವುದಿಲ್ಲ ಎಂದು ತಿಳಿಸಿದನು. ನಂತರ ನಾನು ಪಂಚರು ಅಂಗ ಶೋಧನೆ ಮಾಡಿಕೊಂಡು ನಮ್ಮ ಹತ್ತಿರ ಯಾವುದೇ ಮದ್ಯ ತುಂಬಿದ  ವಸ್ತುಗಳು ಇರುವುದಿಲ್ಲ ಖಾತರಿಪಡಿಸಿಕೊಂಡು ಶೋಧನಾ ವಾರಂಟು ಪಡೆಯಲು ವಿಳಂಬವಾಗುತ್ತದೆ ಎಂದು ತಿಳಿದು ಕಾರ್ನಾಟಕ ಅಬಕಾರಿ ಕಾಯ್ದೆ ಕಲಂ 54 ರಂತೆ ವರದಿಯನ್ನು ತಯಾರಿಸಿ ಅದಕ್ಕೆ ನಾನು ಪಂಚರು ಸಹಿ ಮಾಡಿರುತ್ತೇವೆ. ನಂತರ ಚೀಲದಲ್ಲಿ ಇದ್ದಂತಹ ಪ್ಯಾಕೆಟ್ ಗಳನ್ನು ಪರಿಶಿಸೀಲಿಸಿದಾಗ ಅದರಲ್ಲಿ ಒರಿಜಿನಲ್  ಚಾಯಸ್ ಡಿಲಕ್ಸ್ ಕಂಪನಿಯ 180 ಎಂ ಎಲ್ ಅಳತೆಯ  ವಿಸ್ಕಿ ತುಂದಿದ ಮದ್ಯ ತುಂಬಿದ ಪ್ಯಾಕೇಟ್ಗಳು ಇರುವುದು ಕಂಡು ಬಂತು.

ನಂತರ ನಾವು ಪ್ಯಾಕೇಟ್ ಗಳುನ್ನು  ಪಂಚರ ಮುಖೇನ ಸ್ವಾಧಿನಪಡಿಸಿಕೊಡು ಅದಕ್ಕೆ ಎಸ್ ಎಚ್ ಒ ಅರಗುಸೀಲ್ ಹಾಕಿ ಪ್ಯಾಕ್ ಮುಂದಿನ ಕ್ರಮದ ಬಗ್ಗೆ ಸ್ವಾಧೀನಪಡಿಸಿಕೊಂಡಿರುತ್ತೇವೆ. ನಂತರ ಆರೋಪಿ ವಿನಯ ಕುಮಾರ್ ಗೆ ಸ್ಥಳದಲ್ಲೇ ಕಲಂ 35 (3) ಬಿ ಎನ್ ಎಸ್ ರೀತಿ ನೋಟಿಸ್ ಜಾರಿಗೊಳಿಸಿದ್ದೇನೆ. ಆರೋಪಿಯ ಹತ್ತಿರ ಒಟ್ಟು 3.60 ಲೀಟರ್ ಮದ್ಯ ಸಿಕ್ಕಿರುತ್ತದೆ. ಆರೂಪಿದುಂದ ಒಂದು ಹಳದಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ವಶಪಡಿಸಿಕೊಂಡಿರುತ್ತೇವೆ. ವಿಡಿಯೋ ಚಿತ್ರೀಕರಣ ಮೂಲಕ ಮಹಜರ್ ಜರುಗಿಸಿರುತ್ತೇವೆ. ಆ ಸಮಯದಲ್ಲಿ ರಾತ್ರಿಯಾಗಿದ್ದರಿಂದ ವಾಹನದ ಹೆಡ್ ಲೈಟ್ ಬೆಳಕಿಸಿಂದ ಚಾಸಾ 6 ರವರಿಂದ ಮಹಜರ್ ಜರುಗಿಸಿ ಸುಮಾರು 10.15 ಗಂಟೆಗೆ ಮಹಜರ್ ಮತ್ತು ಸ್ವಾಧೀನ ಪಡಿಸಿಕೊಂಡ ಸೊತ್ತು ಸಮೇತ ಠಾಣೆಗೆ ಬಂದು ಅಕ್ರ ಸಂಖ್ಯೆ 5/2025 ರಂತೆ ಪ್ರ  ವ ವರದಿಯನ್ನು ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂ ಡಿರುತ್ತೇನೆ. ಸ್ವಾಧೀನ ಪಡಿಸಿಕೊಂಡ ಸೊತ್ತುಗಳನ್ನು ಪಿ ಎಫ್ ಸಂಖ್ಯೆ 4/25 ರಂತೆ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತೇನೆ. ನನ್ನ ಸಂಗಡ ಬಂದಿದ್ದ ನನ್ನ ಸಿಬ್ಬಂದಿಗಳು ಹಾಗೂ ಪಂಚರ ಹೇಳಿಕೆಗಳನ್ನು ಪಡೆದಿರುತ್ತೇನೆ. ಪಂಚರ ಹೇಳಿಕೆಗಳನ್ನು ದಿನಾಂಕ 19.01.2025 ರಂದು ಪಡೆದಿರುತ್ತೇನೆ.

ನಂತರ ವಿಡಿಯೋ ಗ್ರಫಿ ಮಾಡಿದ ಬಗ್ಗೆ ಚಾಸಾ5  ರವರಿಂದ ಧೃಡ ಪತ್ರವನ್ನು ಪಡೆದಿರುತ್ತೇನೆ.

ನಾನು ಪಂಚರಿಗೆ ನೀಡಿದ ನೋಟಿಸು, ತಯಾರಿಸಿದ ಶೋಧನಾ ವಾರಂಟು, ಮಹಜರು, ದೂರು, ಪ್ರ ವ ವರದಿ, ಚಾಸಾ5 ರವರಿಂದ ಪಡೆದ ಧೃಡಪತ್ರ ಹಾಗೂ ಅವುಗಳಲ್ಲಿನ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಗಳನ್ನು ಕ್ರಮವಾಗಿ ನಿಶಾನೆ ಪಿ 1 ರಿಂದ ನಿಪಿ 6 ಎಂದು ಹಾಗೂ ಅವುಗಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ 1 ಎ, ನಿಪಿ 2ಎ, ನಿಪಿ3ಎ, ನಿಪಿ4ಎ, ನಿಪಿ5ಎ, ಹಾಗೂ

ನಿಪಿ6ಎ ಎಂದು ಗುರುತಿಸಲಾಯಿತು. ವ್ಯಕ್ತಿಯ ಚಿತ್ರೀಕರಣಗೊಂಡ ಸಿಡಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಸಿಡಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ 7 ಎಂದು ಗುರುತಿಸಲಾಯಿತು.
ಸಾಕ್ಷಿಯು ಮದ್ಯದ ಸ್ಯಾಚೇಟ್ ಗಳನ್ನು ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆ ಮಾಲು 1 ಎಂದು ಗುರುತಿಸಲಾಯಿತು.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಸಮಕ್ಷಮ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ನಿಪಿ 4 ರಲ್ಲಿ ಕಣ್ತಪ್ಪಿನಿಂದ ದಿನಾಂಕ 8.01.2025 ಎಂದು ನಮೂದು ಆಗಿರುತ್ತದೆ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯ ಮುಂದುವರಿದ ಮುಖ್ಯ ವಿಚಾರಣೆಗಾಗಿ ಸಮಾಯವಕಾಶ ಕೋರಿದ್ದು ನೀಡಲಾಗಿದೆ. )

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.